ದೊಡ್ಡ, ಮಧ್ಯಮ ಹಾಗೂ ಚಿಕ್ಕ ನೀರಾವರಿ ಯೋಜನೆಗಳು, ವನ ನಿರ್ಮಾಣ, ಮಣ್ಣು ಸಂರಕ್ಷಣೆ, ಒಣ ಬೇಸಾಯ ಅಭಿವೃದ್ಧಿ, ಬರ ಪೀಡಿತ ಪ್ರದೇಶಗಳ ಅಭಿವೃದ್ಧಿ, ಮುಂತಾದ ಯೋಜನೆಗಳ ಮುಖಾಂತರ ಖಾಯಂ ಪರಿಹಾರ ಒದಗಿಸಲು ಸರ್ಕಾರವು ಯೋಜನೆಗಳನ್ನು ರೂಪಿಸಿ ಕೊಂಡಿದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೋತ್ತರಗಳು ನಮಗೆ ಇನ್ನೂ ಬಂದಿಲ್ಲ. ಆ ಬಗ್ಗೆ ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಿದ್ದೇನೆ.

ಅಧ್ಯಕ್ಷರು —ಈಗ ಕೆಲವು ಬಂದಿವೆ, ಅವನ್ನು ತೆಗೆದುಕೊಳ್ಳಿ. ಉಳಿದೆಲ್ಲವನ್ನು ಕೊಡಿಸುತ್ತೇನೆ. ಈಗ ವರದಿಯನ್ನೊಪ್ಪಿಸುವುದು. ಮಾನ್ಯ ಲಕ್ಷ್ಮೀನರಸಿಂಹಯ್ಯನವರ ಪರವಾಗಿ ಯಾರಾದರೂ ವರದಿಯನ್ನೊಪ್ಪಿಸುತ್ತೀರಾ?

(ಯಾರೂ ಒಪ್ಪಿಸಲಿಲ್ಲ)

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ, ನಾನು ನನ್ನ ಹೆಸರಿನಲ್ಲಿರುವ ಈ ಕೆಳಕಂಡ ಅರ್ಜಿಗಳನ್ನು ಒಪ್ಪಿಸಬಯಸುತ್ತೇನೆ,

" ಅ) ಕೋಲಾರ ಜಿಲ್ಲೆ. ಮುಳಬಾಗಿಲು ತಾಲ್ಲೂಕಿನ, ಅವನಿ ಹೋಬಳಿ ಕೆಂಪಾಪುರ ಗ್ರಾಮದ ಹರಿಜನ ಕೇರಿಗೆ ವಿದ್ಯುತ್ ಪೂರೈಕೆ ಬಗ್ಗೆ

ಆ) ಕೋಲಾರ ಜಿಲ್ಲೆ, ಮುಳಬಾಗಿಲು ತಾಲ್ಲೂಕಿನ ತಾಯಿಲೂರು ಹೋಬಳಿ ಪುಟ್ಟೇನಹಳ್ಳಿ–ಕುರುಬರಪಳ್ಳಿ ರಸ್ತೆಯನ್ನು ದುರಸ್ತಿಪಾಡಿ ಪುಟ್ಟೇನಹಳ್ಳಿ ಹತ್ತಿರ ಮೋರಿಯನ್ನು ನಿರ್ಮಿಸುವ ಬಗ್ಗೆ

ಇ) ಕೋಲಾರ ತಾಲ್ಲೂಕಿನ ವೇಮಗಲ್ ಹೋಬಳಿ ಕಾಡಹಳ್ಳಿ ಗ್ರಾಮಸ್ಥರು ಬಾವಿಗಳನ್ನು ತೋಡಿಸಲು ಪಡೆದ ಸಾಲದ ಮೊತ್ತವನ್ನು ಸರ್ಕಾರವು ಭೂ ಅಭಿವೃದ್ಧಿ ಬ್ಯಾಂಕುಗಳಿಗೆ ಹಾಗೂ ಸಹಕಾರ ಸಂಘಗಳಿಗೆ ನೀಡುವ ಬಗ್ಗೆ "

ಶ್ರೀ ಎ. ಲಕ್ಷ್ಮೀಸಾಗರ್.—ಈಗ ಇಂಡಸ್ಟ್ರೀಸ್ ಮಂತ್ರಿಗಳು ಮತ್ತು ಸಿರಿಕಲ್ಚರ್ ಮಂತ್ರಿಗಳು ಇಲ್ಲದಿರುವುದರಿಂದ ರೇವಿನ್ಯೂ ಮಂತ್ರಿಗಳಿಗೆ ಸಂಬಂಧಪಟ್ಟ ಹಾಗೆ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳಬಹುದು. ಮಾನ್ಯ ಕೃಷ್ಣನ್ ಮತ್ತು ಮಾನ್ಯ ವೆಂಕಟರಾಮಯ್ಯನವರ ಗಮನ ಸೆಳೆಯುವ ಸೂಚನೆಯನ್ನು ಆ ವೇಳೆ ತೆಗೆದುಕೊಳ್ಳಿ. ಇಬ್ಬರು ಮಂತ್ರಿಗಳು ಮೇಲ್ಮನೆಯಲ್ಲಿದ್ದಾರೆ.

ಗಮನ ಸೆಳೆಯುವ ಸೂಚನೆ

ಬಗರ್ ಹುಕುಂನಲ್ಲಿ ಮುಳುಗಡೆದಾರರು ಮತ್ತು ಭೂ ರಹಿತ ಕೂಲಿಗಾರರಿಗೆ ಸಾಗುವಳಿ ಹಕ್ಕನ್ನು ನೀಡದಿರುವುದು

ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಸ್ವಾಮಿ, ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ಭೂಹೀನರು, ಮುಳುಗಡೆದಾರರು ಹಾಗೂ ಭೂ ರಹಿತ ಕೂಲಿಗಾರರಿಗೆ ಸಾಗುವಳಿ ಹಕ್ಕನ್ನು ನೀಡದೆ ಇರುವುದರಿಂದ ಉಂಟಾಗಿರುವ ಬಗ್ಗೆ ಮಾನ್ಯ ಕಂದಾಯ, ಯೋಜನೆ ಮತ್ತು ಕಾರ್ಮಿಕ ಮಂತ್ರಿಯವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—(ಕಂದಾಯ, ಯೋಜನೆ ಮತ್ತು ಕಾರ್ಮಿಕ ಮಂತ್ರಿಗಳು).—ಅಧ್ಯಕ್ಷರೆ, ನಾನು ಈ ಕೆಳಗಿನ ಹೇಳಿಕೆಯನ್ನು ಮಾಡಬಯಸುತ್ತೇನೆ. ಸರ್ಕಾರಿ ಜಮೀನನ್ನು ಬಗರ್ ಹುಕುಂ ಸಾಗುವಳಿ ಮಾಡಿರುವಂತಹ ಹರಿಜನ–ಗಿರಿಜನ, ಭೂರಹಿತರು, ಭೂ ಕಾರ್ಮಿಕರು, ಸಣ್ಣ ರೈತರುಗಳಿಗೆ ಅವರು ಆಕ್ರಮಿಸಿರುವ ಜಮೀನಿನಲ್ಲಿ ಕಾನೂನು ರೀತ್ಯ ಸಕ್ರಮಗೊಳಿಸುವ ಸಲುವಾಗಿ ಸರ್ಕಾರದಿಂದ ಅವಶ್ಯ ಕ್ರಮ ಕೈಕೊಳ್ಳಲಾಗಿದೆ. ಅವುಗಳಲ್ಲಿ ಸರ್ಕಾರದ ಆದೇಶದ ಸಂಖ್ಯೆ ಆರ್‌ಡಿ ೧೦೫ ಎಲ್‌ಜೆಪಿ ೭೭ ದಿನಾಂಕ ೧–೯–೭೭ ರ ಪ್ರಕಾರ ಜಮೀನನ್ನು ೧–೯–೭೭ ಕ್ಕಿಂತ ಮೂರು ವರ್ಷಕ್ಕೆ ಮುಂಚಿತವಾಗಿ ಅನಧಿಕೃತವಾಗಿ ಸಾಗುವಳಿ ಮಾಡುತ್ತಿದ್ದ ಅರ್ಹ ಜನರಿಗೆಲ್ಲರಿಗೂ ಸಕ್ರಮ ಬಗ್ಗೆ ಅರ್ಜಿ ಹಾಕಿಕೊಳ್ಳಲು ೧೫–೧೧–೮೭ ರ ವರೆವಿಗೂ ಕಾಲ ನಿಗದಿ ಪಡಿಸಲಾಗಿತ್ತು ಮತ್ತು ಅರ್ಹರಾದ ಬಹುಕೇತ ಎಲ್ಲರಿಗೂ ಮೇಲ್ಕಂಡ ಆದೇಶದ ಪ್ರಕಾರ ಸಕ್ರಮಗೊಳಿಸಲಾಗಿದೆ.

ಇದೇ ಪ್ರಕಾರ ಹರಿಜನ-ಗಿರಿಜನರಿಗೆ ಮಾತ್ರ ಅನುಕೂಲವಾಗುವಂತೆ ಸರ್ಕಾರದಿಂದ ದಿನಾಂಕ ೨೭-೩-೮೧ ರಂದು ಇನ್ನೊಂದು ಆದೇಶವನ್ನು ಹೊರಡಿಸಲಾಗಿತ್ತು. ಆ ಆದೇಶದ ಪ್ರಕಾರ ಅರ್ಹರಾದ ಹರಿಜನ-ಗಿರಿಜನರುಗಳು ೧-೯-೧೯೮೯ ಕ್ಕಿಂತ ಒಂದು ವರ್ಷದ ಮುಂಚಿತವಾಗಿ ಸರ್ಕಾರದ ಜಮೀನನ್ನು ಬಗರ್‌ಹುಕುಂ ಸಾಗುವಳಿ ಮಾಡಿದ್ದಲ್ಲಿ ಅವರಿಗೆ ಸಕ್ರಮಗೊಳಿಸುವ ಬಗ್ಗೆ ಅರ್ಜಿ ಹಾಕಿಕೊಳ್ಳಲು ೧೫-೮-೮೨ ರ ವರೆವಿಗೂ ಕಾಲಾವಕಾಶ ನೀಡಲಾಗಿತ್ತು. ಈ ಆದೇಶದ ಪ್ರಕಾರ ಅರ್ಹರಾದ ಬಹುತೇಕ ಎಲ್ಲಾ ಹರಿಜನ-ಗಿರಿಜನರಿಗೆ ಸರ್ಕಾರದ ಬಗರ್ ಹುಕುಂ ಭೂಮಿಯನ್ನು ಸಕ್ರಮಗೊಳಿಸಲಾಯಿತು.

ಮೇಲೆ ಹೇಳಿದ ಆದೇಶಗಳ ಅಡಿಯಲ್ಲಿ ಸಾಕಷ್ಟು ಬಗರ್ ಹುಕುಂ ಸಾಗುವಳಿದಾರರ ಜಮೀನನ್ನು ಸಕ್ರಮೀಕರಣಗೊಳಿಸಲಾಗಿದೆ. ಆದರೆ, ಇನ್ನೂ ಒತ್ತುವರಿ ಪ್ರಕರಣಗಳು ನಡೆಯುತ್ತಾ ಬಂದು ಸಕ್ರಮೀಕರಣಗೊಳಿಸುವ ಪ್ರಶ್ನೆ ಉಳಿದಿದೆ. ಆದ್ದರಿಂದ ಬಗರ್ ಹುಕುಂ ಸಾಗುವಾಳಿ ಮಾಡುತ್ತಿರುವ ಜನರಲ್ಲಿನ ಅನಿಶ್ಚಿತತೆಯನ್ನು ಹೋಗಲಾಡಿಸಿ ಅಂಥವರು ಬೇಸಾಯ ಕಸಬನ್ನು ನಿಶ್ಚಿತ ರೀತಿಯಲ್ಲಿ ನಡೆಸಿಕೊಂಡು ಹೋಗಲು ಅನುವು ಮಾಡಿ ಕೊಡಲು ಸರ್ಕಾರವು ಭೂ ಕಂದಾಯ ಅಧಿನಿಯಮ, ೧೯೬೪ ರ ಕಲಂ ೯೪ಳಕ್ಕೆ ಸೂಕ್ತ ತಿದ್ದುಪಡಿಯ ಕರಡನ್ನು ಸದನದ ಮುಂದೆ ಇಟ್ಟಿದೆ. ಈಗ ಸದರಿ ತಿದ್ದುಪಡಿಯ ಕರಡು ಮಸೂದೆಯು (ಅಂದರೆ ೧೯೮೬ ನೇ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ)) ವಿಧಾನ ಮಂಡಲದ ಉಭಯ ಸದನಗಳ ಸಂಯುಕ್ತ ಪರಿಶೀಲನಾ ಸಮಿತಿಯ ಪರಿಶೀಲನೆಯಲ್ಲಿದೆ. ಪಾಸ್ ಆದಮೇಲೆ ರೆಗ್ಯುಲರೈಸ್ ಮಾಡುತ್ತೇವೆ.

ಶ್ರೀ ಬಿ. ಸ್ವಾಮಿರಾವ್.—ಅಧ್ಯಕ್ಷರೇ, ನಾವು ಇಲ್ಲಿ ಕಂದಾಯ ಭೂಮಿ ಮತ್ತು ಅರಣ್ಯ ಭೂಮಿ ಎಂದು ಕೇಳಿದ್ದರೂ, ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ಮಾತ್ರ ಹೇಳಿಕೆ ಬಂದಂತಾಗಿದೆ. ಅನೇಕ ವರ್ಷಗಳಿಂದ ಇಲ್ಲಿ ಹರಿಜನ ಗಿರಿಜನವರಿಗೆ ಮಾತ್ರ ಅವಕಾಶ ಇದೆ. ಈ ಬಗರ್ ಹುಕುಂ ನಲ್ಲಿ ಜಮೀನು ಮಾಡಿರತಕ್ಕಂಥವರು ಎಲ್ಲಾ ಜಾತಿಯವರೂ ಇದ್ದಾರೆ, ಎಲ್ಲಾ ವರ್ಗದವರೂ ಇದ್ದಾರೆ, ಮುಳುಗಡೆ ಪ್ರದೇಶದಿಂದ ಬಂದರೂ ಇದ್ದಾರೆ. ಮುಳುಗಡೆ ಪ್ರದೇಶದಿಂದ ಬಂದವರನ್ನು, ಹೈಪವರ್ ಕಮಿಟಿಯವರು ಮತ್ತು ರಿಹ್ಯಾಬಿಲಿಟೇಷನ್ ಕಮಿಟಿಯವರು ಮಂಗಗಳನ್ನು ತಂದಿದಹಾಗೆ ರೈತರನ್ನು ಬಲಾತ್ಕಾರವಾಗಿ ವ್ಯಾನ್‌ನಲ್ಲಿ ತಂದು ಈ ಸ್ಥಳದಲ್ಲಿ ಬಿಟ್ಟಿದ್ದಾರೆ. ಸರ್ಕಾರ ಖಾಲಿ ಬಿಟ್ಟಿರತಕ್ಕ ಸ್ಥಳದಲ್ಲಿಯೇ ಅವರು ವಾಸವಾಗಿದ್ದಾರೆ.

ಅಧ್ಯಕ್ಷರು.—ನೀವು ಕ್ಲಾರಿಫಿಕೇಷನ್ ಮಾತ್ರ ಕೇಳಬೇಕು. ಈ ರೀತಿ ವಿಷಯವನ್ನು ಹೆಚ್ಚು ಬೆಳೆಸಬೇಡಿ.....

ಶ್ರೀ ಬಿ. ಸ್ವಾಮಿರಾವ್.—ನಾನು ಕ್ಲಾರಿಫಿಕೇಷನ್‌ನ್ನೇ ಕೇಳುತ್ತಾ ಇರುವುದು. ನಾವು ಕೇಳುವುದೇ ಬೇಡ ಎಂದರೆ ಹೊರಗಡೆ ಹೋಗುತ್ತೇನೆ. ಇಲ್ಲಿ ನಾವೇನು ಚಿಕ್ಕಪುಟ್ಟಕ್ಕಳೇ ನಾನೇನು ಮೊದಲನೇ ಸಲ ಅರಿಸಿ ಬಂದಿಲ್ಲ. ನೀವು ವಿವರಣೆ ಕೇಳುವುದು ಬೇಡ ಎಂದರೆ, ಹೊರಗಡೆ ಹೋಗುತ್ತೇವೆ.

ಅಧ್ಯಕ್ಷರು.— ನೀವು ಸಾವಧಾನವಾಗಿ ಕೇಳುವುದಿದ್ದರೆ ಕೇಳಿರಿ. ಈಗ ಮಾನ್ಯ ಕಾನಡೆ ಯವರೇ ನೀವು ಕೇಳಿ. ಆಮೇಲೆ ಅವರು ಕೇಳುತ್ತಾರೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಮಾನ್ಯ ಅಧ್ಯಕ್ಷರೇ, ಹಿಂದಿನ ಸದನದಲ್ಲಿಯೇ ಈ ವಿಚಾರವನ್ನು ಕಮಿಟಿಗೆ ಹಾಕಿದ್ದೇವೆಂದು ತಿಳಿಸಿದ್ದರು. ಈಗ ಇನ್ನೂ ಈಬಗ್ಗೆ ಕಮಿಟಿ ಮಾಡಿಲ್ಲ ಎಂದುತಿಳಿದು ಬರುತ್ತಿದೆ. ಶಿರ್ಸಿ ತಾಲ್ಲೂಕಿನಲ್ಲಿ ೧೯೭೮ ಕ್ಕಿಂತ ಮುಂಚೆ ಯಾರು ಯಾರು ಬಗರ್ ಹುಕುಂ ಸಾಗುವಳಿ ಮಾಡಿಕೊಂಡಿದ್ದರು, ಅವರೆಲ್ಲರಿಗೂ ಅರ್ಜಿ ಕೊಡಿ ಎಂದು ಹೇಳಿದರು. ಆದರಂತೆ ಅಲ್ಲಿ ಇವತ್ತು ೧೦ ಸಾವಿರ ಅರ್ಜಿಗಳು ಬಂದಿವೆ. ಒಂದು ಅರ್ಜಿ ಫಾರಂಗೆ ೨೦ ರೂಪಾಯಿಗಳಂತೆ ವಸೂಲ್ಮಾಡಿದ್ದಾರೆ. ಈ ಅರ್ಜಿಗಳೆಲ್ಲಾ ಎಲ್ಲಿ ಹೋದವು ? ಸುಮ್ಮನೇ ಸುಳ್ಳು ಆಶ್ವಾಸನೆ ಕೊಟ್ಟು ಜನರಿಗೆ ಮೋಸ ಮಾಡಬೇಡಿ. ಇದರ ಬಗ್ಗೆ ಸರಿಯಾದ ಉತ್ತರವನ್ನು ಹೇಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಸುಳ್ಳು ಆಶ್ವಾಸನೆ ಕೊಡತಕ್ಕಂಥದ್ದು ನಮ್ಮ ಸರ್ಕಾರ ಅಲ್ಲ, ನಾವು ಯಾವಾಗಲೂ ಆರಿತಿ ಕೊಟ್ಟಿಲ್ಲ. ಈಗಾಗಲೇ ಹೇಳಿದ್ದೇನೆ, ಕೆಲವು ವಿಚಾರಗಳು ತಿದ್ದುಪಡಿಯಾದ ಮೇಲೆ ಸಕ್ರಮಗೊಳಿಸುವುದಕ್ಕಾಗುತ್ತದೆ. ಅರಣ್ಯ ಇಲಾಖೆಗೆ ಹೋಗಿರುವ ಭೂಮಿಯನ್ನು ವಾಪಸ್ ಪಡೆಯುವ ಬಗ್ಗೆ ಕಮಿಟಿ ನೇಮಕ ಮಾಡುವುದಕ್ಕೆ ಈಗಾಗಲೇ ಕ್ರಮ ತೆಗೆದುಕೊಂಡಿದೆ. ಕೆಲವೊಂದು ಕಾನೂನುಗಳ ತೊಡಗುಗಳು ಇವೆ. ಕೇಂದ್ರಸರ್ಕಾರದ ಕಾನೂನು

ಇದೆ. ಇಲ್ಲಿ ನಾವು ಪದೇ ಪದೇ ಈ ವಿಷಯವನ್ನು ಚರ್ಚೆ ಮಾಡಿದ್ದೇವೆ. ಈ ವಿಷಯದ ಬಗ್ಗೆ ಕಮಿಟಿಯಲ್ಲಿ ಚರ್ಚೆ ಮಾಡಿ ಸೂಕ್ತ ನಿರ್ಣಯವನ್ನು ತೆಗೆದುಕೊಳ್ಳಲಾಗುವುದು. ಈಗ ಪಾಸಗಿಯಾಗಿ ಬೇಕಾದರೆ ಅನೇಕ ವಿಚಾರಗಳನ್ನು ತಿಳಿಸಬಹುದು. ಈ ಮನೆಯಲ್ಲಿ ನಾವು ಏನು ಮಾತಾಡಿದರೂ ಅದು ರೆಕಾರ್ಡ್ ಆಗುತ್ತದೆ. ಭಾರತದ ಕಾನೂನು ನಮಗೆ ಅಡ್ಡ ಬರುತ್ತದೆ. ಕಮಿಟಿ ನೇಮಕ ಮಾಡಿದಮೇಲೆ, ಆ ಕಮಿಟಿಯಲ್ಲಿ ಚರ್ಚೆ ಮಾಡಿ ಸೂಕ್ತ ನಿರ್ಣಯ ತೆಗೆದುಕೊಳ್ಳಲಾಗುವುದು.

ಶ್ರೀ ಗೋಪಾಲ ಪುಕಾಂದ ಕಾನಡೆ.—ಅರಣ್ಯದಲ್ಲಿ ಎಷ್ಟು ಜಮೀನನ್ನು ಅತಿಕ್ರಮ ಮಾಡಿದ್ದಾರೆ, ಅದನ್ನು ಕೇಂದ್ರಸರ್ಕಾರಕ್ಕೆ ಕಳುಹಿಸಿಕೊಡಿ. ಯಾವ ಯಾವ ರೈತರು ಅತಿಕ್ರಮ ಮಾಡಿದ್ದಾರೆ, ಅವರಿಗೆ ಫ್ರೀಯಾಗಿ ಮಂಜೂರ್ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೇ. ನಾನು ಕೇಳುವುದು ತಮ್ಮ ಕ್ಷೇತ್ರಕ್ಕೂ ಸಂಬಂಧಪಟ್ಟಿದ್ದು ಈ ರಾಜ್ಯಕ್ಕೇ ಸಂಬಂಧಪಟ್ಟಿದ್ದುದು ಎಂಬುದನ್ನು ತಾವು ಮರೆಯಬಾರದು. ತಮ್ಮಲ್ಲೂ ಬಗರ್ ಹುಕುಂ ರೈತರು ಇದ್ದಾರೆ. ದುರ್ಬಲರೂ ಇದ್ದಾರೆ. ನಾವು ಎದ್ದು ನಿಂತಾಗ ತಾವು, ಕುಳಿತುಕೊಳ್ಳಿ, ಕುಳಿತುಕೊಳ್ಳಿ ಎಂದು ಹೇಳುವುದು ಸರಿಯಲ್ಲ.

ಅಧ್ಯಕ್ಷರು.—ಈಗ ಮಾನ್ಯ ಕಾನಡೆಯವರು ಎರಡು ಕ್ಲಾರಿಫಿಕೇಷನ್ ಕೇಳಿದರು, ಮಾನ್ಯ ಸಚಿವರಿಂದ ಉತ್ತರ ತೆಗೆದುಕೊಂಡರು. ನೀವು ಕೂಡ ಅದೇರೀತಿ ಕ್ಲಾರಿಫಿಕೇಷನ್ ಕೇಳಿ ಉತ್ತರ ಪಡೆಯಿರಿ ಎಂದು ನಾನು ಹೇಳುವುದು.

ಶ್ರೀ ಬಿ. ಸ್ವಾಮಿರಾವ್.—ಈಬಗ್ಗೆ ಕಮಿಟಿ ಮಾಡುವುದರಲ್ಲೂ ತೊಡಕು ಇದೆ ಎಂದು ಹೇಳಿದರು. ಆದರೆ ಕೆಲವು ತಾಲ್ಲೂಕುಗಳಲ್ಲಿ ಕಮಿಟಿ ಮಾಡಿದ್ದಾರೆ, ಮತ್ತೆ ಕೆಲವು ತಾಲ್ಲೂಕುಗಳಲ್ಲಿ ಕಮಿಟಿ ಮಾಡಿಲ್ಲ. ಇದರಲ್ಲೂ ರಾಜಕೀಯ ಸೇರಿದೆ. ಹಲವಾರು ವರ್ಷಗಳಿಂದ ಸ್ವಾಧೀನ ನೂಡಿಕೊಂಡು, ಬೆಳೆ ಬೆಳೆಯುತ್ತಿದರೂ, ಅರಣ್ಯ ಇಲಾಖೆಯವರು ಹೆಚ್ಚು ದುಡ್ಡನ್ನು ಸಂಪಾದನೆ ಮಾಡಬೇಕೆಂಬ ದೃಷ್ಟಿಯಿಂದ ಬೆಳೆಯ ಮೇಲೆ ಗಿಡ ಹಾಕುತ್ತಿದ್ದಾರೆ, ಇದನ್ನು ತಾವು ತಡೆಯಬೇಕು. ಇದು ನಿಮ್ಮ ಕ್ಷೇತ್ರದಲ್ಲೂ ಇದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕಮಿಟಿ ಮಾಡುವುದರಲ್ಲಿ ಏನೂ ತೊಡಕಿಲ್ಲ. ತೊಡಕಿರುವುದು ಅರಣ್ಯ ಭೂಮಿಯನ್ನು ವರ್ಗಾವಣೆ ಮಾಡುವುದರಲ್ಲಿ. ಕಮಿಟಿ ಮಾಡುವುದಕ್ಕೆ ತೊಡಕಿಲ್ಲ. ಅದನ್ನು ಮಾಡೋಣ. ಎಲ್ಲೆಲ್ಲಿ ಅರಣ್ಯ ಇಲಾಖೆಯವರು ಈ ರೀತಿ ಮಾಡಿದ್ದಾರೆ ಎಂಬ ವಿವರಗಳನ್ನು ಕೊಟ್ಟರೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ನಿಯಮ ೩೩೪ರ ಮೇರೆಗೆ

(೧) ಬೀದರಿನ ಕಾರಂಜ ಸಕ್ಕರೆಯಂ ಕಾರ್ಖಾನೆಯೆಂನ್ನು ತೆರೆಯಂಪ ಬಗ್ಗೆ

ಅಧ್ಯಕ್ಷರು.—ಶ್ರೀ ಬಸವರಾಜ್ ಹಾನಗಪ್ಪ ಪಾಟೀಲ್.—ಅಬ್ಸೆಂಟ್.

SRI MOHAMMED LAIQUDDIN.—Daily more than 12000 tons of Sugarcane is being transported to Maharashtra from Bidar District. The production of Sugarcane in Bidar is double of the capacity of the capacity of Bidar Sugar Factory at Hallikhed. Karanja Sugar Factory is sanctioned to Bidar about three years back. Share amount worth more than 65 lakhs were collected. It was promised to start the Karanja Sugar Factory during 1987. No progress is made till today in this direction. Whether the Government is not interested in starting the said Sugar Factory? If not, when this factory will be started, the cane growers of Bidar District are facing great hardship in reaping the benefit